# ಜಾಗೃತಿಯ ಮೊದಲ ಹೆಜ್ಜೆ

ಮೊಬೈಲ್ ಫೋನ್‌ಗಳು ಆಟಿಕೆಗಳಂತಾಗಿರುವ ಸಂದರ್ಭದಲ್ಲೇ, ಅವುಗಳ ಬಳಕೆಯಿಂದ ಉಂಟಾಗಬಹುದಾದ ಆರೋಗ್ಯ ಸಮಸ್ಯೆಗಳ ಕುರಿತ ಆತಂಕವೂ ಹೆಚ್ಚುತ್ತಿದೆ. ಮೊಬೈಲ್ ಫೋನ್ ಮತ್ತು ಅವುಗಳಿಗೆ ಸಂಪರ್ಕ ಕಲ್ಪಿಸುವ ಗೋಪುರಗಳು ಸೂಸುವ ವಿಕಿರಣಗಳ ಬಗೆಗಿನ ಆತಂಕ ಇಂದು ನಿನ್ನೆಯದಲ್ಲ. ಮೊಬೈಲ್ ಫೋನ್ ಬೆಳವಣಿಗೆಯ ಜೊತೆ ಜೊತೆಗೇ ಹೆಚ್ಚುತ್ತಿರುವ ಆತಂಕವಿದು.

ಸಂವಹನ ಕ್ರಾಂತಿಯ ಪ್ರತೀಕವಾಗಿ ಬಿಂಬಿಸಲಾಗುತ್ತಿರುವ ಮೊಬೈಲ್ ಫೋನ್‌ಗಳು ಆಟಿಕೆಗಳಂತಾಗಿರುವ ಸಂದರ್ಭದಲ್ಲೇ, ಅವುಗಳ ಬಳಕೆಯಿಂದ ಉಂಟಾಗಬಹುದಾದ ಆರೋಗ್ಯ ಸಮಸ್ಯೆಗಳ ಕುರಿತ ಆತಂಕವೂ ಹೆಚ್ಚುತ್ತಿದೆ. ಮೊಬೈಲ್ ಫೋನ್ ಮತ್ತು ಅವುಗಳಿಗೆ ಸಂಪರ್ಕ ಕಲ್ಪಿಸುವ ಗೋಪುರಗಳು ಸೂಸುವ ವಿಕಿರಣಗಳ ಬಗೆಗಿನ ಆತಂಕ ಇಂದು ನಿನ್ನೆಯದಲ್ಲ. ಮೊಬೈಲ್ ಫೋನ್ ಬೆಳವಣಿಗೆಯ ಜೊತೆ ಜೊತೆಗೇ ಹೆಚ್ಚುತ್ತಿರುವ ಆತಂಕವಿದು. ಈ ವಿಕಿರಣಗಳಿಂದ ನಿದ್ರಾಹೀನತೆ, ತಲೆನೋವು, ಮರೆಗುಳಿತನ, ಮೈಕೈ ಶೂಲೆಗಳಂತಹ ಸಮಸ್ಯೆಗಳ ಜೊತೆಗೆ ಕ್ಯಾನ್ಸರ್‌ನಂತಹ ಮಾರಣಾಂತಿಕ ಕಾಯಿಲೆ ತಲೆದೋರುತ್ತದೆ ಎನ್ನಲಾಗಿದೆ. ಆ ಕಾರಣಕ್ಕಾಗಿಯೇ ಮೊಬೈಲ್ ಗೋಪುರಗಳು ಚೆಲ್ಲುವ ವಿಕಿರಣ ಪ್ರಮಾಣದ ಮೇಲೆ ಆಸ್ಟ್ರೇಲಿಯಾ, ರಷ್ಯಾ ಸೇರಿದಂತೆ ಕೆಲವು ದೇಶಗಳು ನಿಯಂತ್ರಣ ಹೇರಿವೆ. ಆದರೆ, ಇತ್ತೀಚಿನವರೆಗೂ ಭಾರತದಲ್ಲಿ ಅಂಥ ಬಿಗಿ ಕ್ರಮಗಳು ಇರಲಿಲ್ಲ. ಈ ನಿಟ್ಟಿನಲ್ಲಿ, ಸೆ.1ರಿಂದ ಗೋಪುರಗಳಿಂದ ಹೊಮ್ಮುವ ವಿಕಿರಣದ ಪ್ರಮಾಣವನ್ನು ಹತ್ತನೇ ಒಂದು ಭಾಗದಷ್ಟು ತಗ್ಗಿಸುವ ಕೇಂದ್ರ ಸರ್ಕಾರದ ನಿರ್ಧಾರ ಜಾರಿಗೆ ಬರಲಿರುವುದು ಮೊಬೈಲ್ ಕ್ಷೇತ್ರದಲ್ಲಿ ಒಂದು ಮಹತ್ವದ ಹೆಜ್ಜೆ.

ಅಂತರ ಸಚಿವಾಲಯ ಸಮಿತಿ ಸಲಹೆಯ ಮೇರೆಗೆ ವಿಕಿರಣದ ಪ್ರಮಾಣವನ್ನು ತಗ್ಗಿಸಲು ಸರ್ಕಾರ ಮುಂದಾಗಿದೆ. ಸಾರ್ವಜನಿಕರ ಆರೋಗ್ಯದ ಮೇಲೆ ಮೊಬೈಲ್ ತರಂಗಗಳು ಬೀರಬಹುದಾದ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಆತಂಕ ವ್ಯಕ್ತಪಡಿಸಿದ್ದ ಈ ಸಮಿತಿ– ಗುಬ್ಬಿ, ಜೇನು, ದುಂಬಿ, ಮತ್ತಿತರ ಜೀವಿಗಳ ಬದುಕಿಗೂ ಈ ತರಂಗಗಳು ಸಂಚಕಾರ ತಂದಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿತ್ತು. ಜನದಟ್ಟಣೆಯ ಸ್ಥಳ, ಶಾಲೆ, ಆಟದ ಮೈದಾನ ಮತ್ತು ಆಸ್ಪತ್ರೆಗಳ ಸುತ್ತಮುತ್ತ ಮೊಬೈಲ್ ಗೋಪುರಗಳ ಸ್ಥಾಪನೆಯನ್ನು ನಿರ್ಬಂಧಿಸುವಂತೆ ಸಲಹೆ ಮಾಡಿತ್ತು. ಮೊಬೈಲ್ ಫೋನ್ ದುಷ್ಪರಿಣಾಮಗಳ ಬಗ್ಗೆ ವಿಶ್ವಸಂಸ್ಥೆಯೂ ಆತಂಕ ವ್ಯಕ್ತಪಡಿಸಿದೆ.

ಪ್ರಸ್ತುತ, ಭಾರತದಲ್ಲಿ ಮೊಬೈಲ್ ಗೋಪುರಗಳು ಹೊರಚೆಲ್ಲುವ ವಿಕಿರಣ ಪ್ರಮಾಣ ಪ್ರತಿ ಚದರ ಮೀಟರ್‌ಗೆ 9.2 ವ್ಯಾಟ್‌ನಷ್ಟಿದೆ. ಈ ಪ್ರಮಾಣ ರಷ್ಯಾದಲ್ಲಿ 0.2ರಷ್ಟಿದ್ದರೆ, ಚೀನಾದಲ್ಲಿ 0.4ರಷ್ಟಿದೆ. ಅಮೆರಿಕಾ, ಕೆನಡಾ, ಜಪಾನ್‌ನಂತಹ ಶ್ರೀಮಂತ ದೇಶಗಳಲ್ಲಿ 12 ವ್ಯಾಟ್‌ಗಳಷ್ಟಿದೆ. ಆದರೆ, ಮೊಬೈಲ್ ಗೋಪುರಗಳ ವಿಕಿರಣ ಪ್ರಮಾಣ ತಗ್ಗಿಸುವ ಕುರಿತ ಚರ್ಚೆಗಳು ವಿಶ್ವದೆಲ್ಲೆಡೆ ಚಾಲ್ತಿಯಲ್ಲಿವೆ. ಈ ಚರ್ಚೆಗಳ ಫಲಶ್ರುತಿಯ ಮುನ್ನುಡಿ ಎನ್ನುವಂತೆ, ಭಾರತದಲ್ಲಿ ವಿಕಿರಣ ಪ್ರಮಾಣ 9.2ರಿಂದ 0.92 ವ್ಯಾಟ್/ಚ.ಮೀ.ಗೆ ಇಳಿಯಲಿದೆ. ಈ ಮೂಲಕ ವಿಕಿರಣಗಳ ಬಗ್ಗೆ ಹೆಚ್ಚು ಜಾಗರೂಕವಾಗಿರುವ ದೇಶಗಳ ಸಾಲಿಗೆ ಭಾರತ ಸೇರುತ್ತಿದೆ. ಹೊಸ ನಿಯಮದ ಅನ್ವಯ, ವಿಕಿರಣ ಮಿತಿ ಉಲ್ಲಂಘಿಸುವ ಸೇವಾಸಂಸ್ಥೆಗಳಿಗೆ ಪ್ರತಿ ಗೋಪುರಕ್ಕೆ 5 ಲಕ್ಷ ರೂಪಾಯಿ ದಂಡ ವಿಧಿಸಲಾಗುತ್ತದೆ. ಅಂತೆಯೇ ಭಾರತಕ್ಕೆ ಆಮದಾಗುವ ಸೆಲ್ ಫೋನ್‌ಗಳು ಕಟ್ಟುನಿಟ್ಟು ಪರೀಕ್ಷೆಗೆ ಒಳಪಡಲಿವೆ.

‘ವಾಸಸ್ಥಳ ಅಥವಾ ಕೆಲಸದ ಸ್ಥಳದ 50 ಮೀಟರ್ ವ್ಯಾಪ್ತಿಯಲ್ಲಿ ಮೊಬೈಲ್ ಟವರ್ ಇದೆಯೆಂದರೆ, ನಾವು ಮೈಕ್ರೊ ಓವನ್ ಒಳಗೆ ಇದ್ದೇವೆಂದೇ ಅರ್ಥ’ ಎನ್ನುವ ವಿಶ್ಲೇಷಣೆಗಳಿವೆ. ಸೆಲ್ ಫೋನ್– ಸಿಗರೇಟ್ ಉದ್ಯಮಗಳ ನಡುವೆ ಹೆಚ್ಚು ವ್ಯತ್ಯಾಸವಿಲ್ಲ ಎನ್ನುವವರೂ ಇದ್ದಾರೆ.

ಮೊಬೈಲ್ ಗೋಪುರಗಳು ಚೆಲ್ಲುವ ವಿಕಿರಣಗಳ ನಿಯಂತ್ರಣದ ಪ್ರಯತ್ನ ಅರ್ಥಹೀನ ಎಂದು ‘ಮೊಬೈಲ್‌ಫೋನ್ ಮಾರುಕಟ್ಟೆ’ಯ ಕೆಲವರು ವಿಶ್ಲೇಷಿಸಿದ್ದಾರೆ. ‘ವಿಕಿರಣಗಳನ್ನು ದುರ್ಬಲಗೊಳಿಸುವುದೆಂದರೆ ಮೊಬೈಲ್ ಸೇವೆಯನ್ನು ಶಕ್ತಿಹೀನಗೊಳಿಸುವುದು ಎಂದೇ ಅರ್ಥ. ಇದರಿಂದಾಗಿ ಮೊಬೈಲ್ ಫೋನ್ ಬ್ಯಾಟರಿಗಳು ಹೆಚ್ಚು ಕೆಲಸ ಮಾಡಬೇಕಾಗಿ ಶಕ್ತಿಗುಂದುತ್ತವೆ. ಗ್ರಾಹಕರಿಗೆ ತೊಂದರೆಯಾಗುತ್ತದೆ’ ಎನ್ನುವುದು ಇವರ ತರ್ಕ. ಈ ಅಳಲಿನಲ್ಲಿ ಸತ್ಯಾಂಶ ಇರುವುದಾದರೂ, ಇಂಥ ಮಾತುಗಳ ಹಿಂದೆ ಪ್ರಬಲ ಮಾರುಕಟ್ಟೆ ಇರುವುದನ್ನು ಗಮನಿಸಬೇಕು. ಮಾರುಕಟ್ಟೆಯ ಹಿತಾಸಕ್ತಿಗೂ ಸಾರ್ವಜನಿಕರ ಆರೋಗ್ಯಕ್ಕೂ ನಡುವಣ ಅಂತರವನ್ನೂ ಗಮನಿಸಬೇಕು.

ದೂರುಗಳ ನಡುವೆಯೂ ಸಂವಹನ ಕ್ಷೇತ್ರದಲ್ಲಿ ಹೊಸ ಚರಿತ್ರೆ ಬರೆದ ಅಗ್ಗಳಿಕೆ ಮೊಬೈಲ್ ಫೋನ್‌ಗೆ ಸಲ್ಲಬೇಕು. ಆದರೆ, ಅತಿಯಾದರೆ ಅಮೃತವೂ ಹಾಲಾಹಲವಾಗುತ್ತದೆ ಎನ್ನುವ ಉದಾಹರಣೆಗಳು ಪುರಾಣ, ಚರಿತ್ರೆಗಳುದ್ದಕ್ಕೂ ಸಾಕಷ್ಟಿವೆ. ಮೊಬೈಲ್ ಫೋನನ್ನು ನಾವಿಂದು ನಿರಾಕರಿಸುವ ಸ್ಥಿತಿಯಲ್ಲಿಲ್ಲ. ಆದರೆ, ನಿಯಂತ್ರಿಸುವ ಆಯ್ಕೆಯಂತೂ ಇದ್ದೇ ಇದೆ. ಬಳಕೆದಾರರು ಸ್ವ ನಿಯಂತ್ರಣ ಹೇರಿಕೊಂಡರೆ ಮೊಬೈಲ್‌ಗೆ ಸಂಬಂಧಿಸಿದ ಅನೇಕ ಸಮಸ್ಯೆಗಳು ತಿಳಿಯಾಗುತ್ತವೆ. ಈ ಜಾಗೃತಿಯ ನಿಟ್ಟಿನಲ್ಲಿ ಮೊಬೈಲ್ ಗೋಪುರಗಳ ವಿಕಿರಣದ ಪ್ರಮಾಣವನ್ನು ತಗ್ಗಿಸುವ ಸರ್ಕಾರದ ಪ್ರಯತ್ನ ಒಂದು ಪ್ರಮುಖ ಹೆಜ್ಜೆಯಾಗಿದೆ.

■ ರಘುನಾಥ ಚ.ಹ.



ವಿಷ್ಣು.